Reg No. B.G 11 — 11-3-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಒಂದು ತಿಂಗಳಲ್ಲಿ ತೆಲಂಗಾಣ ರಾಜ್ಯ ಸ್ಥಾಪನೆಯಾಗಬೇಕಂತೆ !

ಮೈಸೂರು ನಜರಬಾದು ರಾಣಾ ಪ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ – ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ
ವಿವಿಧ ವಿನೋದಾವಳಿಗಳು
ಮಲಬಾರಿನ ನುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಜ್ಞಾಪಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ಸಂಪಾದಕ : ಸತ್ಯವಾದಿ

ಚಾಮರಾಜಪುರಂ, ಮೈಸೂರು 4.

ಪೆಸಿಫಿಕ್ ರಾಣಿ

ಮೆಲ್ಬೋರ್ನ್— 21 ವರ್ಷದ ಚೀನಿ ಯುವತಿ ಸಾಟ್ನೆ ವು 'ಪೆಸಿಫಿಕ್ ರಾಣಿ" ಯಾಗಿ ಆಯ್ಕೆಯಾಗಿ 4 ಸಾವಿರ ಆಸ್ಟ್ರೇಲಿಯಾ ಡಾಲರು, 500 ಡಾಲರು ಕಂಠಾಹಾರ ಮತ್ತು ಪರ್ಯಟನ ಸೌಕರ್ಯ ಪಡೆದಳು.

ಜೋಟಾ ನೋಟು

ನವದೆಹಲ್ಲಿ — ಪುಗಳೂರಿನಲ್ಲಿ ವಶಪಡಿಸಿಕೊಳ್ಳಲಾದ ರೂ. 1 ಕೋಟಿ ಜೋಟಾ ನೋಟಿನ ವಿಚಾರದಲ್ಲಿ ಶ್ರೀ ದ ಯಾ ಭೃಪಟೇಲರು ರಾಜ್ಯಸಭೆಯಲ್ಲಿ ತಂದ ಕಾಲ್ ಅಟೆರ್ಷನ್ ಸೂಚನೆಯ ಬಗ್ಗೆ ಮಾತನಾಡುತ್ತಾ, ಶ್ರೀ ಭೂಪೇಶಗುಪ್ತರು 'ಈ ಸರಕಾರವು ಜೋಟಾ ಸರಕಾರವು ಜೋಟಾ ಸರಕಾರ" ಎಂದರು. ಈ ಮಾತನ್ನು ವಾಪಸ್ಸು ಪಡೆಯಬೇಕೆಂದು ಹಲವರು ಕೂಗಿಕೊಂಡರು — ಆಗ ಸ್ವತಂತ್ರ ಪಕ್ಷ ಸದಸ್ಯ ರತ್ನಸ್ವಾಮಿಯವರು 'ಭೂಪೇಶಗುಪ್ತರು ಹೇಳಿದ್ದು, ಈ ಸರಕಾರ ಜೋಟಾ ಸರಕಾರವೆಂದೂ, ಮತ್ತು ಜೋಟಾಹಣ ತಯಾರಿಸುವ ಸರಕಾರ ಎಂದಲ್ಲವೆಂದು ತಮಗೆ ತೋರುವುದಾಗಿ ತಿಳಿಸಿದನ್ತರ ಗಲಾಟೆ ಶಾಂತಗೊಂಡಿತು.

★

ಪಶ್ಚಿಮ ಬಂಗಾಳ ಬಡ್ಜೆಟ್

ಕಲ್ಕತ್ತಾ—69-70 ರ ಪಶ್ಚಿಮ ಬಂಗಾಳ ಬಜೆಟ್‌ನಲ್ಲಿ ರೂ. 35.36 ಕೋಟಿ ಜೋತಾ ಇದೆ – ಹೊಸ ತೆರಿಗೆ ವಿಧಿಸುವ ಯೋಜನೆಯಿಲ್ಲ – ಕೇಂದ್ರದ ಆಡಳಿತ ಪಕ್ಷ ಹೆಚ್ಚು ಸೌಕರ್ಯ ಒದಗಿಸಬೇಕಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರ

●

ಜೋಟಾ ನೋಟು ಮೊಖದ್ದಮೆ

ಬೆಂಗಳೂರು— ಕೂಡ್ಡಿ ಸ್ವಾಮಿಯವರು ಒಬ್ಬ ಅಪರಾಧಿಯಾಗಿರುವ ಜೋಟಾ ನೋಟು ಮೊಖದ್ದಮೆಯ ವಿಚಾರಣೆಯು ಸೆಷನ್ ಜಡ್ಜರ ಮುಂದೆ ಬುಧವಾರ ಪ್ರಾರಂಭವಾಗುವುದು.

★

ಶ್ರೀ ದೇಸಾಯರವರ ವಿಷಯದಲ್ಲಿ

ನವದೆಹಲಿ— ಉಪಪ್ರಧಾನಿ ಶ್ರೀ ದೇಸಾಯರವರು 67-68 ಬಡ್ಜೆಟ್‌ನಲ್ಲಿ ಬಿರ್ಲಾ ಅಲ್ಯೂಮಿನಿಯ ಸಂಸ್ಥೆಗೆ ರೂ. 1 ಕೋಟಿ ರಿಯಾಯಿತಿ ಕೊಟ್ಟರುವರೆಂದೂ, ಬೊಂಬಾಯಿ ಕೈಗಾರಿಕಾ ಮತ್ತು ರಸಾಯನಿಕ ಕಂಪೆನಿಗೆ ತನ್ನ ಸ್ವಂತ ಹಣ 56000 ಮತ್ತು ತನ್ನ ವಿದ್ಯಾಭ್ಯಾಸ ಟ್ರಸ್ಟು ಹಣ ನಿಂದ ರೂ 86000 ಕೊಟ್ಟರುವರೆಂದೂ ರಾಜ್ಯಸಭೆಯಲ್ಲಿ ಶ್ರೀ ಚಂದ್ರಶೇಖರರು ಆಪಾದಿಸಿದರು – ಈ ಕಂಪೆನಿಯು ಕೆಲವು ಬಿರ್ಲಾ ಸಂಸ್ಥೆಗಳ ಏಜೆನ್ಸಿ ಹೊಂದಿರುವುದಾಗಿ ತೀರ್ಮಾನವಾಗಿದೆ.

⊙

ಎನರ್ಜಿಸ್ಟ್ ಪತ್ತುವವರು

ಕಲ್ಕತ್ತಾದಲ್ಲಿ ಎನರ್ಜಿಸ್ಟು ಆಕ್ಷೇಪಣ ತಂಡದವರು ಕೊಡಬೇಕಾಗಿದ್ದ 4800 ರೂಗಳನ್ನು ನೇಪಾಳ ಸರಕಾರ 10000 ಕ್ಕೆ ಹೆಚ್ಚಿಸಿದೆ ; ಇನ್ನೂ ಕೆಲವು ನಿಬಂಧನೆಗಳನ್ನೂ ಹಾಕಿದೆ.

ಹೈದರಾಬಾದು— ಏಪ್ರಲ್ 9 ರೊಳಗೆ ತೆಲಂಗಾಣಾ ರಾಜ್ಯ ಸ್ಥಾಪನೆಯಾಗಬೇಕೆಂದು 20000 ಮಂದಿ ಸೇರಿದ್ದ ಸಭೆಯಲ್ಲಿ ನಿರ್ಧರಿಸಲಾಯಿತು — ರುದ್ರಸೇನೆ ಸ್ಥಾಪಿಸಬೇಕೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರು.

★

ಅನಿರ್ದಿಷ್ಟ ಕಾಲವಲ್ಲ

ಬೆಂಗಳೂರು— ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮೈಸೂರು–ಮಹಾರಾಷ್ಟ್ರ ಗಡಿ ವ್ಯಾಜ್ಯದ ವಿಷಯದ ಕಟ್ಟಕಡೆ ನಿರ್ಧಾರವನ್ನು ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಲು ನಿರ್ಧರಿಸಿಲ್ಲವೆಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಶಾಸನ ಸಭೆಯಲ್ಲಿ ತಿಳಿಸಿದರು.

●

ನಿವೃತ್ತರಾಗುವ ಬೆದರಿಕೆ

ನವದೆಹಲಿ— ತಮ್ಮ ಮೇಲೆ ಅಲ್ಲಗಳೆಯುವ ಚಳವಳಿ ನಿಲ್ಲದೆ ಮುಂದುವರಯುತ್ತಿದ್ದರೆ, ತಾವು ನಿವೃತ್ತಿಗೊಳ್ಳುವ ಬಗ್ಗೆ ಯೋಚಿಸಬೇಕಾಗುವುದೆಂದು ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯ್ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯಲ್ಲಿ ಹೇಳಿದರು.

★

ನ್ಯಾಯಾಂಗ ವಿಚಾರಣೆ ಇಲ್ಲ

ಬೆಂಗಳೂರು— ಶನಿವಾರ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಸಂಬಂಧದಲ್ಲಿ ನ್ಯಾಯಾಂಗ ವಿಚಾರಣೆಯ ಅವಶ್ಯಕತೆ ಸರಕಾರಕ್ಕೆ ಕಂಡುಬಂದಿಲ್ಲವೆಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಶಾಸನಸಭೆಯಲ್ಲಿ ತಿಳಿಸಿದರು.

★

ಡಿ ಎಂ ಕೆ ವಿಜಯ

ಪಾಂಡಿಚೆರಿಯಲ್ಲಿ ನಡೆದ ಶಾಸನಸಭಾ ಚುನಾವಣೆಯಲ್ಲಿ 30 ಸ್ಥಾನಗಳಲ್ಲಿ ಡಿ ಎಂ ಕೆ ಗೆ 15 ಕಾಂಗ್ರೆಸ್ಸಿಗೆ 10 ಸ್ಥಾನಗಳು ದೊರೆತಿವೆ.

ಗಿರಿಜನರ ಹಾವಳಿ

ಹೈದರಾಬಾದು— ಸುಮಾರು 200 ಗಿರಿಜನರು ಪೊಕಾರಿ ಗ್ರಾಮದ ಗುಂಪು ಸ್ವಾಮಿ ಮನೆಗೆ ನುಗ್ಗಿ ಆತನನ್ನು ಕೊಂದು ಮನೆಯಲ್ಲಿದ ಇತರ ಮೂವರನ್ನು ಗಾಯಗೊಳಿಸಿ ರೂ. 1000 ಬೆಲೆಯ ಬಟ್ಟೆ ಒಡವೆ ಅಪಹರಿಸಿ ಪರಾರಿಯಾದರು.

○

ಬೆಳಗಾಂ ಕಾರವಾರದ ಮೇಲೆ ಕಣ್ಣು

ಬೊಂಬಾಯಿ— ಶಾಸನ ಸಭೆಗಳಲ್ಲಿ ಸಂಪೂರ್ಣ ಮಹಾಷ್ಟ್ರ ಸಮಿತಿಗೆ ಸೇರಿದ ವಿರೋಧ ಸದಸ್ಯರು ಗೌರ್ನರ್ರರ ಭಾಷಣಕ್ಕೆ ಬಹಿಷ್ಕಾರ ಹಾಕಿ 'ಬೆಳಗಾಂ ಕಾರವಾರ ಮಹಾರಾಷ್ಟ್ರದಲ್ಲಿ ಸೇರ್ಪಡೆಯಾಗಬೇಕು ಎಂದು ಘೋಷಣೆ ಮಾಡುತ್ತಾ ಸಭಾ ಪರಿತ್ಯಾಗ ಮಾಡಿದರು.

✶

ಮಿಲಿಟರಿ ಖರ್ಚು

ಅಮೇರಿಕಾದ ಆಯುಧ ಹತೋಟಿ ಮತ್ತು ನಿಶ್ಶಸ್ತ್ರೀಕರಣ ಸಂಸ್ಥೆಯ ವರದಿಯಂತೆ— ವಿಶ್ವವು 1966 ರಲ್ಲಿ 159000 ಮಿಲಿಯ ಡಾಲರುಗಳನ್ನು ಶಸ್ತ್ರಾಸ್ತ್ರಗಳಿಗಾಗಿ ಖರ್ಚುಮಾಡಿತು: 1967 ರಲ್ಲಿ ಸುಮಾರು 182000 ಮಿಲಿಯ ಖರ್ಚು ಅಂದಾಜಾಗಿದೆ ; 1968 ರಲ್ಲಿ ಇದಕ್ಕೂ ಹೆಚ್ಚಾಗಿರುವದೆಂದು ಹೇಳಲಾಗಿದೆ — ವರ್ಷೇ ವರ್ಷೆ ಹೆಚ್ಚುತ್ತಿದೆ



Protect the Cow

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah. Sri Madhav Shenoi Sri Opera Talkies Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks

Editor, 'Satyavadi' Chamarajapuram, Mysore 4

ವುಡ್‌ಲ್ಯಾಂಡ್ಸ್

ಜಯಪ್ರದ 2ನೇ ವಾರ

ಅಮೋಘ ಆರಂಭ

— ಚಿತ್ತಾಕರ್ಷಕ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕ ಚಿರಾಗ್

ಪಾತ್ರ— ಧರ್ಮೇಂದ್ರ, ಬಿಶ್ವಜಿತ್, ವಹೀದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೇವ್ — ಸಂಗೀತ : ಮದನ್ ಮೋಹನ್

[ದಿನ 3 ಪ್ರದರ್ಶನಗಳು]

ಆಪೆರಾ

ಜನಪ್ರಿಯ 2ನೇ ವಾರ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನೆ ತೆರಿಗೆ ಮನ್ನಾ ಮಾಡಿದೆ ಪೂರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Help The Gorakshana

ಆಶೋಕ ಏಜೆನ್ಸೀಸ್

ಬಾಸ್ಪಡ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಜಯವರ್ಧಕ ಔಷಧಗಳಿಗಾಗಿ ದೊರೆಯಿರಿ ಕ್ಷಮಿಸಿ

Edited, Printed & Published by Chaitanya Prachara Niranta M S Krishna Rao (Proprietor) at the Satyavadi Press Chamarajapuram, Mysore 4